(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ವಿಧಾನ ಸಭೆಯಲ್ಲಿ ಇವತ್ತು ಏನು ನಡೆಯುತ್ತಿದೆ, ಏನು ರೂಲಿಂಗ್ ಅನ್ನು ತಾವು ಕೊಡುತ್ತಿದ್ದೀರಿ, ಈ ಸರ್ಕಾರದ ನಡವಳಿಕೆ ಯಾವ ರೀತಿ ಇದೆ ಎಂಬುದರ ಬಗ್ಗೆ ಇಡೀ ಕರ್ನಾಟಕ ರಾಜ್ಯದ ಜನತೆ ಇವತ್ತು ವಿಧಾನಸಭೆಯನ್ನು ನೋಡುತ್ತಿದ್ದಾರೆ. ಪಿ.ಯು.ಸಿ. ಓದುತ್ತಿರುವಂತಹ ಮಕ್ಕಳ ಪೋಷಕರು ಮತ್ತು ಪಾಲಕರು...

Mr. Speaker:- I have allowed Mr. Sampangi to talk.

(ಗೊಂದಲ)

(ಬಿಜೆಪಿ ಹಾಗೂ ಇನ್ನಿತರ ಎಲ್ಲಾ ಪಕ್ಷಗಳ ವಿರೋಧ ಪಕ್ಷಗಳ ಸದಸ್ಯರು ಬಾವಿಯಲ್ಲಿ ನಿಂತು ಕೂಗಲು ಪ್ರಾರಂಭಿಸಿದರು)

(2) ಮಂತ್ರಿಗಳ ಹೇಳಿಕೆ

ವಿಷಯ:- ಬರಗಾಲದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು

+ ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬರಗಾಲದ ಬಗ್ಗೆ ಅವರು ಬಹಳಷ್ಟು ಚರ್ಚೆ ಮಾಡಿದರು. ಆಟ್‌ಲೀಸ್ಟ್ ಸ್ಟೇಟ್‌ಮೆಂಟ್ ಮಾಡುವುದಕ್ಕಾದರೂ ಅವಕಾಶ ಮಾಡಿ ಕೊಡಿ. ಹಣ ಬಿಡುಗಡೆ ಮಾಡುವುದು, ಕುಡಿಯುವ ನೀರಿಗೆ ದುಡ್ಡು ಕೊಡುವುದು, ಜಾನುವಾರುಗಳಿಗೆ ಮೇವು ಕೊಡುವುದು ಇದಕ್ಕಾದರೂ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು:- ಮಲ್ಲಿಕಾರ್ಜುನ ನೀವು ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:- ಸಿಇಟಿ ಬಗ್ಗೆ ಸ್ಟೇಟ್‌ಮೆಂಟ್ ಕೊಡಲಿ. ಬರಗಾಲದ ಬಗ್ಗೆ ಕೇಳಿದ್ದಾರೆ ಅವರು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಗೌರ್ವನರ್ಸ್ ಅಡ್ರೆಸ್‌ನಲ್ಲಿ ಉತ್ತರ ಕೊಟ್ಟಿದ್ದೇವೆಂದು ಹೇಳುತ್ತಾರೆ, ಇಲ್ಲಿ ಬರಗಾಲದ ಬಗ್ಗೆ ಹೇಳುತ್ತಿದ್ದಾರೆ. ಮೊದಲು ಸಿಇಟಿ ಬಗ್ಗೆ ನಿಮ್ಮ ಸ್ಟ್ಯಾಂಡ್ ಏನೆಂಬುದನ್ನು ಹೇಳಿ.

ಅಧ್ಯಕ್ಷರು:- ಬರಗಾಲದ ಬಗ್ಗೆ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ಬಹಳ ಕಾತುರದಿಂದ ಇದ್ದಾರೆ. ಮಲ್ಲಿಕಾರ್ಜುನ್ ತಾವು ಸ್ಟೇಟ್‌ಮೆಂಟ್ ಓದಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಸುಮಾರು 11 ಜನ ಶಾಸಕರು ಈ ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ತಾವು ನನಗೆ ಉತ್ತರ ಕೊಡುವುದಕ್ಕೆ ಅಪ್ಪಣೆ ಕೊಟ್ಟಿದ್ದೀರಿ, ನಾನು ಉತ್ತರ ಕೊಡುತ್ತಿದ್ದೇನೆ. ಸುಮಾರು 159 ತಾಲ್ಲೂಕುಗಳು ಇವತ್ತು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆಯಾದ ಮೇಲೆ ಸರ್ಕಾರ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ, ಸುಮಾರು 1550 ಕೋಟಿ ರೂಪಾಯಿಗಳ ಹಣ, 11 ಲಕ್ಷ ಟನ್ ಅಕ್ಕಿಯನ್ನು ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಆ ಪ್ರಕಾರ ಕೇಂದ್ರ ಸರ್ಕಾರದವರು ಇಲ್ಲಿಯವರೆಗೆ ಸುಮಾರು 3.65 ಲಕ್ಷ ಟನ್ ಅಕ್ಕಿ ಕೊಟ್ಟಿದ್ದಾರೆ. ಸುಮಾರು 189 ಕೋಟಿ ರೂಪಾಯಿ ಹಣ ಕೊಟ್ಟಿದ್ದಾರೆ. ಇದಲ್ಲದೆ ಮೊನ್ನೆ ಕೂಡ 1.65 ಲಕ್ಷ ಟನ್ ಅಕ್ಕಿ ಕೊಟ್ಟಿದ್ದಾರೆ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ 3.44 ಲಕ್ಷ ಟನ್ ಅಕ್ಕಿ ಖರ್ಚಾಗಿರುವುದು ಕಳುಹಿಸಿ ಕೊಟ್ಟಿದ್ದೇವೆ. ಇದಲ್ಲದೆ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಸುಮಾರು 350 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ. 250 ಕೋಟಿ ರೂಪಾಯಿ

ಕೊಟ್ಟಿದ್ದರ ಜೊತೆಗೆ ನಾವು 350 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸುಮಾರು 90,000 ಕಾಮಗಾರಿಗಳು ಎಲ್ಲಾ ಕಡೆ ನಡೆಯುತ್ತಿವೆ. ಎಲ್ಲಾ ಕಡೆ ಜಿಲ್ಲಾ ಉಸ್ತುವಾರಿ ಸಚಿವರು ಕ್ರಮ ತೆಗೆದುಕೊಂಡಿದ್ದಾರೆ. ಎಲ್ಲೆಲ್ಲಿ ಅವ್ಯವಹಾಗವಾಗಿದೆ ಅಂತಹ ಕಡೆಗಳಲ್ಲೆಲ್ಲಾ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಇನ್ನು ಮುಖ್ಯವಾದ ಅಂಶವೇನೆಂದರೆ, ಮೊನ್ನೆ ನಡೆದಂತಹ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಎಲ್ಲಾ ಸದಸ್ಯರು ಕೇಳಿದರು, ನಾವು ಊರಿಗೆ ಹೋಗುವುದಕ್ಕಾಗುತ್ತಿಲ್ಲ, ನಮಗೆ ಕುಡಿಯುವ ನೀರಿನ ಸಮಸ್ಯೆ ಇದೆ, ಬರಗಾಲ ಬಂದಿರುವುದರಿಂದ ಬಹಳ ತೊಂದರೆ ಇದೆ ಎಂದು ಹೇಳಿದರು. ದುಡ್ಡು ಕೊಡಿ ಎಂದು ಹೇಳಿದ ಮೇಲೆ, ಮೊನ್ನೆ ನಡೆದ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಸುಮಾರು 100 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ನಾಳೆ ಸರ್ಕಾರ ಆದೇಶ ಹೊರಡಿಸುತ್ತಿದೆ. ಇದರಲ್ಲಿ ಪ್ರತಿ ತಾಲ್ಲೂಕಿಗೆ 30 ಲಕ್ಷ ರೂಪಾಯಿಗಳನ್ನು ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಕೊಡುತ್ತಿದ್ದೇವೆ. 15 ಲಕ್ಷ ರೂಪಾಯಿಗಳು ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಟ್ಟಿದ್ದೇವೆ. ಅರ್ಬನ್ ವಾಟರ್‌ಗೆ ಕೂಡ 9 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ, ಮುಂದಿನ ಮೂರು ತಿಂಗಳುಗಳಲ್ಲಿ ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಬರಗಾಲ ಕಾಮಗಾರಿ ಯಶಸ್ವಿಗೊಳಿಸುತ್ತೇವೆ. ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ, ಜನರಿಗೆ ಕೆಲಸ ಕೊಡುತ್ತೇವೆ. ಜಾನುವಾರುಗಳಿಗೆ ಮೇವು ಒದಗಿಸುವ ವ್ಯವಸ್ಥೆಯನ್ನು ಈ ರಾಜ್ಯದಲ್ಲಿ ಮಾಡುತ್ತೇವೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಅವರು ರೂಲಿಂಗ್ ಓದುವುದಕ್ಕೆ ಕೂಡ ಬಿಡಲಿಲ್ಲ ಎಂದರೆ ಏನರ್ಥ? What is this? I can't understand you people. ಓದಿ ಹೇಳುತ್ತೇನೆಂದರೂ ಬಿಡಲಿಲ್ಲ ಎಂದರೆ ಹೇಗೆ? ಕೋಪ ಬರುವ ಹಾಗೆ ಏಕೆ ಮಾಡಬೇಕಾಗಿತ್ತು ನೀವು? ಸುರೇಶ್ ಕುಮಾರ್ ಏನು ಹೇಳಿದರು, ಧರಣಿ ನಡೆಯುತ್ತಿದೆ, ಹೌಸ್ ಸರಿ ಇಲ್ಲವೆಂದು ಹೇಳಿದರು, ಓದಿ ಹೇಳುತ್ತೇನೆಂದರೂ ಅಲೋ ಮಾಡಲಿಲ್ಲ ಎಂದರೆ ಹೇಗೆ? ಜಯಕಾರ ಹಾಕುತ್ತಿದ್ದರೆ ಜನ ಏನು ಹೇಳುತ್ತಾರೆ, ಇವರು ಅಧ್ಯಕ್ಷರಿಗೆ ಅಲೋ ಮಾಡುತ್ತಿಲ್ಲ ಇವರು ಎಂತಹ ಶಾಸಕರು ಎಂದು ಜನ ಹೇಳುವುದಿಲ್ಲವೇ?

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ಗುಂಡಿಯಲ್ಲಿ ನಿಂತುಕೊಂಡು ಮಾತನಾಡುವವರಿಗೆ ನೀವು ಉತ್ತರ ಕೊಡುವ ಅಗತ್ಯ ಇಲ್ಲ. ನೀವು ಕೇಂದ್ರ ಸರ್ಕಾರದವರು ಮಾಡಬೇಕಾಗಿತ್ತು. ಇದು ರಾಷ್ಟ್ರೀಯ ನೀತಿ ನಿಮಗೆ ಗೊತ್ತಿಲ್ಲ. ಉಪ ನಾಯಕರಾಗಿದ್ದೀರಿ. ನಿಯಮ ಗೊತ್ತಿಲ್ಲದೆ ಮಾತನಾಡುತ್ತೀರಿ. ನೀವು ಉಪ ನಾಯಕರಾಗಿದ್ದೀರಿ, ನಿಯಮಗಳೇ ಗೊತ್ತಿಲ್ಲ ನಿಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸಭಾಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರುಗಳು ಅಭಿವ್ಯಕ್ತ ಮಾಡಿದ ಅಭಿಪ್ರಾಯಕ್ಕೆ ವಿಶೇಷವಾಗಿ ಮನ್ನಣೆ ಗೌರವ ನಮಗೆ ಇದೆ. ಈ ಸದನವನ್ನು ಬಹಳ ಗೌರವದಿಂದ ಕಳೆದ ಒಂದು ತಿಂಗಳಿನಿಂದ ನಡೆಸಿಕೊಂಡು ಬಂದಿದ್ದಾರೆ. ನಮಗೆ ಇರತಕ್ಕಂತಹ ತೊಂದರೆಯನ್ನು ನಾವು ಬೆಳಿಗ್ಗೆ ನಿವೇದನೆ ಮಾಡಿದ್ದೇವೆ. ಇದೇ ವಿಚಾರ ನಾಳೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿಲಿದೆ. ಕ್ಯಾಬಿನೆಟ್ ತೀರ್ಮಾನ ಆಗದೆ ನಾನು ಈ ಸದನದಲ್ಲಿ ಹೇಳುವಂತಹ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ನಾಳೆ ಕ್ಯಾಬಿನೆಟ್‌ನಲ್ಲಿ ಏನಾದರೂ ತೀರ್ಮಾನ ಬರಬಹುದು, ಆದ್ದರಿಂದ ನಾವು ಈ ವಿಚಾರವನ್ನು ಇವತ್ತು ಈ ಸದನದಲ್ಲಿ ಹೇಳುವ

ಸ್ಥಿತಿಯಲ್ಲಿ ಇಲ್ಲ ಎನ್ನುವುದನ್ನು ತಮಗೆ ಮನವರಿಕೆ ಮಾಡಿ ಕೊಡುವುದಕ್ಕೆ ನಾನು ಬೆಳಿಗ್ಗೆಯಿಂದ ಪ್ರಯತ್ನ ಮಾಡುತ್ತಿದ್ದೇನೆ. ಅತ್ಯಂತ ಮುಖ್ಯವಾಗಿರತಕ್ಕಂತಹ ಕೆಲವು ಜರೂರು ಮಸೂದೆಗಳಿವೆ, ಅವುಗಳನ್ನು ಮಂಡನೆ ಮಾಡುವುದಕ್ಕೆ, ಮತ್ತು ಮಸೂದೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮಕ್ಕಳ ದೇಶದ ಭವಿಷ್ಯವೇ ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಕೊಡುತ್ತಿಲ್ಲ. ನಮ್ಮ ದೇಶದಲ್ಲಿರತಕ್ಕಂತಹ ಬರ ಪರಿಸ್ಥಿತಿ ಬಗ್ಗೆ ಒಂದು ಹೇಳಿಕೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ, ಈ ಶಾಸನ ಸಭೆಯಲ್ಲಿ ಏನು ಚರ್ಚೆ ಮಾಡಬೇಕೆಂದು ತಾವು ತೀರ್ಮಾನ ಮಾಡಬೇಕು. ನಾನು ಅವರಲ್ಲಿ ಪುನಃ ಮನವಿ ಮಾಡುತ್ತೇವೆ, ಈ ದಿವಸ ಅವರು ಎಷ್ಟೇ ಪ್ರಯತ್ನ ಮಾಡಿದರೂ ನಾವು ಈ ಸದನಕ್ಕೆ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲ ಎನ್ನುವ ಸಂದಿಗ್ಧತೆಯನ್ನು ತಮ್ಮ ಮೂಲಕ ಪುನಃ ನಿವೇದನೆ ಮಾಡಿಕೊಳ್ಳುತ್ತೇನೆ. ಅದರ ಮೇಲೆ ಅವರಿಗೆ ಮತ್ತು ತಮಗೆ ಬಿಟ್ಟ ವಿಚಾರ.

ಅಧ್ಯಕ್ಷರು:- ಬಿಎಸಿ ಮೀಟಿಂಗ್‌ನಲ್ಲಿ ಏನು ತೀರ್ಮಾನವಾಗಿದೆ, 31ನೇ ತಾರೀಖು ಸಂಜೆ ಆರು ಗಂಟೆಯವರೆಗೆ ಸದನ ನಡೆಸಬೇಕೆಂದು ತೀರ್ಮಾನವಾಗಿದೆ. ಇನ್ನು ಎರಡುವರೆ ಗಂಟೆ ನಮಗೆ ಸಮಯ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಿಎಸಿ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿದ್ದು ಏನು? ಸಿಇಟಿ ಬಗ್ಗೆ ಉತ್ತರ ಬೇಕೆಂದು ನಾವು ಹೇಳಿದ್ದೆವು. ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ಇದು ಕಳೆದ ಅಕ್ಟೋಬರ್‌ನಿಂದ ನಡೆದಿರತಕ್ಕಂತಹ ವ್ಯವಹಾರ. ಸದನ ಪ್ರಾರಂಭವಾದ ತಕ್ಷಣ ಫೆಬ್ರವರಿ 28ನೇ ತಾರೀಖು ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಒಂದು ತಿಂಗಳಾದರೂ ಕೂಡ ಮಕ್ಕಳ ಭವಿಷ್ಯದ ಜೊತೆ ಸರ್ಕಾರ ಚೆಲ್ಲಾಟ ಆಡುವುದಾದರೆ ಸರ್ಕಾರದ ಖಚಿತವಾದ ನಿಲುವು ಏನು? ಸದನವನ್ನು ನಾಳೆ ಮುಂದಕ್ಕೆ ಹಾಕಿ ಅವರು ನಾಳೆ ಕ್ಯಾಬಿನೆಟ್ ಸೇರಲಿ, ತೀರ್ಮಾನ ಮಾಡಲಿ. ಅದಾದ ಮೇಲೆ ಸರ್ಕಾರ ನಮಗೆ ತಿಳಿಸಲಿ.

ಶ್ರೀ ಜಗದೀಶ್ ಶೆಟ್ಟರ್:- ಡಾ: ಪರಮೇಶ್ವರ್‌ರವರು ಮೂರು ಗಂಟೆಗೆ ಬಂದು ಉತ್ತರ ಹೇಳುತ್ತಾರೆಂದು ಹೇಳಿದರು, ಅವರ ಕಡೆಯಿಂದ ಉತ್ತರ ಬರಲಿಲ್ಲ. ಮಾನ್ಯ ಚಂದ್ರೇಗೌಡರು ಮೊನ್ನೆ ಹೇಳಿದರು, ಇದಕ್ಕೆ ಡಾ: ಪರಮೇಶ್ವರ್‌ರವರೇ ಉತ್ತರ ಹೇಳಬೇಕಾಗುತ್ತದೆ ಎಂದು ಹೇಳಿದರು. ನಾನು ಸಬ್ ಕಮಿಟಿ ಛೇರ್ಮನ್ ಇರುವುದರಿಂದ ನಾನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಆದರೆ ಡಾ: ಪರಮೇಶ್ವರ್‌ರವರು ಇದುವರೆಗೂ ಬರಲಿಲ್ಲ. ಮಾನ್ಯ ಚಂದ್ರೇಗೌಡರು ಹೇಳುತ್ತಿದ್ದಾರೆ, ನಾಳೆ ಕ್ಯಾಬಿನೆಟ್ ಮೀಟಿಂಗ್ ಕರೆಯುತ್ತಿದ್ದೇವೆ, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ವಿಷಯ ಪ್ರಸ್ತಾಪ ಮಾಡಿ, ನಾಳೆ ಒಂದು ನಿರ್ಣಯ ಕೈಗೊಳ್ಳುತ್ತವೆಂದೂ ಹೇಳಿದರು. ಹಾಗಾದರೆ ನಮಗೆ ಒಂದು ದಿವಸದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ನಾಳೆ ಅಧಿವೇಶನ ಮುಂದಕ್ಕೆ ಹಾಕಿ ನಾಳೆನೂ ಎಲ್ಲಾ ಬಿಲ್ ಪಾಸ್ ಮಾಡಬಹುದು. ನಾಳೆ ಅವರು ಕ್ಲಿಯರ್ ಆಗಿ ಕ್ಯಾಬಿನೆಟ್‌ನಲ್ಲಿ ಡಿಸ್ಕಷನ್ ಮಾಡಿಕೊಂಡು, ಸಿಇಟಿ ವ್ಯವಸ್ಥೆಯನ್ನು ಮುಂದುವರೆಸುವ ಬಗ್ಗೆ ಸರ್ಕಾರದ ನೀತಿ ಈ ರೀತಿ ಇದೆ ಎನ್ನುವುದನ್ನು ನಾಳೆ ಅವರು ಈ ಸದನದಲ್ಲಿ ಹೇಳಿಕೆ ಕೊಡಲಿ. ಬರಗಾಲದ ಬಗ್ಗೆ ಹೇಳಿಕೆ ಕೊಟ್ಟರು, ಆಗಿನಿಂದ ನಾವು ಬರಗಾಲ ಬಗ್ಗೆ ಹೇಳಿಕೆ ಕೊಡಿ ಎಂದು ಒತ್ತಾಯ ಮಾಡುತ್ತಿದ್ದರೂ ಗೊಂದಲದ ಮಧ್ಯೆ ಬರಗಾಲ ಪರಿಸ್ಥಿತಿ ಬಗ್ಗೆ ಹೇಳಿಕೆ ಕೊಡುತ್ತಾರೆ. ಸಿಇಟಿ ಬಗ್ಗೆ ಹೇಳಿಕೆ ಕೊಡಿ ಎಂದು ಹೇಳಿದರೆ, ಹೇಳಿಕೆ ಕೊಡುವುದಕ್ಕಾಗುತ್ತಿಲ್ಲ.

ಇವೊತ್ತು ಬಡ ವಿದ್ಯಾರ್ಥಿಗಳಿಗೆ ಸಿಗಬೇಕಾದ ಸಾಮಾಜಿಕ ನ್ಯಾಯಕ್ಕೆ ಹೊಡೆತ ತರುವಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಆದುದರಿಂದ ಸಿಇಟಿ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ಇವೊತ್ತೇ ಹೇಳಬೇಕು. ಇಂದು ಆಗುವುದಿಲ್ಲ, ನಾಳೆ ಕ್ಯಾಬಿನೆಟ್ ಡಿಸಿಶನ್ ತೆಗೆದುಕೊಂಡು ಹೇಳುತ್ತೇವೆ ಎಂದರೆ ನಾಳೆಯೇ ಸದನದಲ್ಲಿ ಹೇಳಲಿ. ಆ ಬಗ್ಗೆ ತೀರ್ಮಾನ ಸರ್ಕಾರಕ್ಕೆ ಬಿಟ್ಟದ್ದು. ನಾಳೆ ಇದರ ಬಗ್ಗೆ ಹೇಳುವುದಾದರೆ ನಾಳೆಗೆ ಸದನವನ್ನು ತಾವು ಮುಂದೂಡಿ.

ಅಧ್ಯಕ್ಷರು:- ನಾಳಿದ್ದೇ ಯುಗಾದಿ ಹಬ್ಬ ಇರುವುದರಿಂದ ಅನೇಕ ಶಾಸಕರುಗಳು ಅವರ ಕ್ಷೇತ್ರಗಳಿಗೆ ಹೋಗಲು ಈಗಾಗಲೇ ಟಿಕೆಟ್ ಬುಕ್ ಮಾಡಿಸಿದ್ದಾರೆ. ಆದ್ದರಿಂದ I have to take the sense of the House. ನಾಳೆಗೆ ಸದನವನ್ನು ಕರೆಯಬೇಕು ಎಂದರೆ ಸದನದಲ್ಲಿಯೇ ಆ ಬಗ್ಗೆ ಈಗ ಕೇಳೋಣ. If the House says we can meet tommorrow, I have no objection.

(ಗೊಂದಲ)

ಅಧ್ಯಕ್ಷರು:- ಚಂದ್ರೇಗೌಡರೆ, ತಾವು ವಿಧೇಯಕವನ್ನು ಪರ್ಯಾಲೋಚನಾ ಪ್ರಸ್ತಾವಕ್ಕೆ ಮಂಡಿಸಿ.

3) ಶಾಸನ ರಚನೆ

ಅ) ಪರ್ಯಾಲೋಚನಾ ಪ್ರಸ್ತಾವ

(i) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2002

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2002 (2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 30)ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದಲ್ಲಿ 2ನೇ ಖಂಡವನ್ನು ಅದರ 3ನೇ ಖಂಡವೆಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ 2ನೇ ಖಂಡಕ್ಕೆ ಮರು ಸಂಖ್ಯೆ ನೀಡುವ ಮೊದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-